# ಜನಪದರಂಗಭೂಮಿಯಲ್ಲಿ'ಸಣ್ಣಾಟ' ಕಲೆ

## (ಸಂಗ್ಯಾ-ಬಾಳ್ಯಾ ನಾಟಕವನ್ನು ಅನುಲಕ್ಷಿಸಿ)

ಶ್ರೀನಿವಾಸ.ಎಸ್. ನಲವಾಗಲ
ಸಂಶೋಧನಾ ವಿದ್ಯಾರ್ಥಿ
ಕನ್ನಡ ಸಾಹಿತ್ಯಅಧ್ಯಯನ ವಿಭಾಗ
ಕನ್ನಡ ವಿಶ್ವ ವಿದ್ಯಾಲಯ – ಹಂಪಿ

### ಪೀಠಿಕೆ :-

ರಂಗಭೂಮಿಎಂಬುದಕ್ಕೆ ಆಟ ಅಥವಾ ನಾಟಕಆಡುವ ಸ್ಥಳವೆಂದು ಸಾಮಾನ್ಯಅರ್ಥ. ಆಟ ಅಥವಾ ನಾಟಕವನ್ನು ನಿರ್ಧಿಷ್ಟವಾದ ಸ್ಥಳದಲ್ಲಿ ಪ್ರದರ್ಶನ ಮಾಡುವುದು ,ಅಲ್ಲಿ ಪ್ರೇಕ್ಷಕರು ನೆರೆದು ನೋಡುವುದುರಂಗಭೂಮಿಯಲ್ಲಿ ನಡೆಯುವ ಮುಖ್ಯ ಕ್ರಿಯೆಗಳಾಗಿವೆ.ರಂಗಭೂಮಿಒಂದು ಪ್ರದರ್ಶನಕಲೆಯಾಗಿರುವುದರಿಂದಇದೊಂದು ಸಂಕೀರ್ಣಕಲೆಯಾಗಿದೆ. ಇದರಲ್ಲಿ ಸಾಹಿತ್ಯ , ಸಂಗೀತ , ಅಭಿನಯ ಮತ್ತು ವೇಷಭೂಷಣಗಳಿರುವುದರಿಂದ ಇದುಎಲ್ಲಾ ಸ್ವಭಾವಗಳ ಜನರನ್ನುಏಕಕಾಲದಲ್ಲಿರಂಜಿಸುವ ಮಾಧ್ಯಮವಾಗಿದೆ. ಮೇಲಾಗಿ ಅಕ್ಷರಸ್ಥರು ಮತ್ತುಅನಕ್ಷರಸ್ಥರುಒಟ್ಟಿಗೆರಂಜಿಸಬಲ್ಲ ಏಕೈಕ ಕಲಾ ಮಾಧ್ಯಮವಾಗಿದೆ.

### ರಂಗಭೂಮಿಯ ಉಗಮ :-

ಜಗತ್ತಿನ ಪ್ರತಿಯೊಂದು ಮಾನವ ಸಮುದಾಯಗಳಲ್ಲಿಯೂ ಬಹು ಪ್ರಾಚೀನ ಕಾಲದಿಂದಲೂ ರಂಗಕ್ರಿಯೆಗಳು ಬೆಳೆದು ಬಂದಿವೆ. ಕೆಲವೊಂದು ಆದಿವಾಸಿ ಮತ್ತು ಬುಡಕಟ್ಟುಗಳಲ್ಲಿ ಇಂದಿಗೂ ಆಚರಣೆಗಳ ರೂಪದಲ್ಲಿ ಬೆಳೆದು ಬಂದಿರುವ ವಿಶಿಷ್ಟ ರಂಗಕ್ರಿಯೆಗಳು ಪ್ರಾಚೀನರಂಗಭೂಮಿಯ ಕುರುಹುಗಳಾಗಿವೆ.

ಭಾರತೀಯರಂಗಭೂಮಿಯು ಹುಟ್ಟಿದ್ದು ಸಹ ಕುಲದೇವತಾ ಆರಾಧನೆಗಳಲ್ಲಿ , ವರ್ಷದ ಜಾತ್ರೆಗಳು ಮರಳಿದಾಗ , ಸುಗ್ಗಿಯ ಫಸಲು ಬಂದಾಗ , ಸಮುದಾಯದ ಜನಗಳೆಲ್ಲಾ ಕುಣಿದು ಕುಪ್ಪಳಿಸಿ ಆಡುವುದು , ಹಾಡುವುದುಒಂದುಆಚರಣೆಯಾಗಿಜನಪದರಜೀವನದಲ್ಲಿ ಎಂದಿನಿಂದಲೂರೂಢಿಯಲ್ಲಿದೆ.


### ಕರ್ನಾಟಕಜನಪದರಂಗಭೂಮಿ :-

ಕರ್ನಾಟಕದಜನಪದರಂಗಭೂಮಿಯ ಹಲವು ಪ್ರಕಾರಗಳಲ್ಲಿ ಬಯಲಾಟ ಮತ್ತುಯಕ್ಷಗಾನ ಮುಖ್ಯವಾಗಿವೆ. ಕರಾವಳಿ ಸೀಮೆಯಲ್ಲಿ ಯಕ್ಷಗಾನಗಳು ತುಂಬಾ ಪ್ರಸಿದ್ಧಿಯಲ್ಲಿದ್ದರೂ ಬಯಲಾಟಗಳು ಯಕ್ಷಗಾನಕ್ಕಿಂತ ಪ್ರಾಚೀನ ರಂಗಕಲೆಗಳಾಗಿವೆ.

ಕರ್ನಾಟಕದಲ್ಲಿಜನಪದರಂಗಭೂಮಿಯ ಪ್ರಾಚೀನತೆಯ ಕೆಲವೊಂದು ಪ್ರಕಾರಗಳನ್ನು ಬಯಲಾಟದ ಮಾದರಿಯಾಗಿಗುರುತಿಸಲಾಗಿದೆ.ಅವುಗಳಲ್ಲಿ 'ಪಗರಣ ಮತ್ತು ಬಹುರೂಪಿ' ಮುಖ್ಯವಾಗಿವೆ. ಕನ್ನಡದ ಮೊದಲನೆಯ ಉಪಲಬ್ದ ಕೃತಿ'ಕವಿರಾಜಮಾರ್ಗ'ದಲ್ಲಿ ಪಗರಣದ ಪ್ರಸ್ತಾಪವಿದೆ.ಪಗರಣವು ಸಂಸ್ಕೃತದ ದಶರೂಪಕಗಳಲ್ಲಿ ಒಂದಾದ ಪ್ರಕರಣಕ್ಕೆ ಸಂವಾದಿಯಾದರೂಪವಿದು.ಇದುಅಭಿನಯ ಪ್ರಧಾನವಾಗಿದ್ದುಕುಣಿತದಜೊತೆಯಲ್ಲಿ ಪ್ರದರ್ಶನಗೊಳ್ಳುವ ಜನಪದರಂಗಕಲೆಯಾಗಿದೆ.

## *ಬಯಲಾಟದ ಪ್ರಕಾರಗಳು :–*

ಸಂಗ್ಯಾ–ಬಾಳ್ಯಾ ನಾಟಕದಲ್ಲಿ ಬಯಲಾಟಗಳು ಆಯಾ ಪ್ರದೇಶದ ವೈಶಿಷ್ಟ್ಯಗಳ ಹಿನ್ನಲೆಯಲ್ಲಿ ಬೆಳೆದು ಬಂದಿವೆ.ಇದರಿಂದ ಪ್ರಾದೇಶಿಕ ವ್ಯತ್ಯಾಸವನ್ನು ಒಳಗೊಂಡ ವಿಭಿನ್ನ ಪ್ರಕಾರಗಳಾಗಿ ಬೆಳೆದು ನಿಂತಿದೆ.ಈ ಹಿನ್ನಲೆಯಲ್ಲಿಕರ್ನಾಟಕದ ಬಯಲಾಟಗಳನ್ನು ಹೀಗೆ ವರ್ಗೀಕರಿಸಬಹುದು.





## *ಸಣ್ಣಾಟ :–*

ಉತ್ತರಕರ್ನಾಟಕದಲ್ಲಿ ಬಯಲಾಟದ ಪರಂಪರೆಎರಡು ಕವಲಾಗಿ ಒಡೆದುದರಿಂದ ಸಣ್ಣಾಟವೆಂಬ ಪ್ರಕಾರವೊಂದು ಕಾಣಿಸಿಕೊಂಡಿದೆ.ಸಣ್ಣಾಟಕ್ಕೆ'ಡಪ್ಪಿನಾಟ'ವೆಂತಲೂ ಮತ್ತೊಂದು ಹೆಸರಿದೆ. ಬಯಲಾಟ ಮೂಲತಃ ವೀರರಸಪ್ರಧಾನವಾದುದು. ದೊಡ್ಡಟವೆಂತಲೂ , ಶೃಂಗಾರ ಮತ್ತು ಭಕ್ತಿರಸ ಪ್ರಧಾನವಾದುದು ಸಣ್ಣಾಟವೆಂದುಗುರುತಿಸಲ್ಪಟ್ಟಿದೆ.

## *ಸಣ್ಣಾಟದ ಪ್ರಕಾರಗಳು :–*

ಸಣ್ಣಾಟಗಳಲ್ಲಿ ವಸ್ತುವನ್ನಾಧರಿಸಿ ಕೆಲವೊಂದು ಪ್ರಕಾರಗಳಿವೆ ಅವುಗಳನ್ನು ಹೀಗೆ ವರ್ಗೀಕರಿಸಿ ತೋರಿಸಬಹುದು.



## *ಸಂಗ್ಯಾ–ಬಾಳ್ಯಾ ನಾಟಕ :–*

ಸಂಗ್ಯಾ–ಬಾಳ್ಯಾ ಗೀತ ನಾಟಕದಕಥಾವಸ್ತು 19 ನೇ ಶತಮಾನದಉತ್ತರಾರ್ಧದಲ್ಲಿಉತ್ತರೆಕರ್ನಾಟಕದ ಬೈಲಹೊಂಗಲದ ಸುತ್ತಮುತ್ತ ನಡೆದಿದೆಎನ್ನಲಾದಒಂದು ಘಟನೆಯನ್ನಾದರಿಸಿ ರಚಿತವಾಗಿದೆಎಂದು ನಂಬಲಾಗಿದೆ.

## *ಸಂಗ್ಯಾ–ಬಾಳ್ಯಾ ನಾಟಕದ ಪಾತ್ರಗಳು :–*

*1. ಗಂಗಿ 2. ಸಂಗಣ್ಣ 3. ಈರಣ್ಣ 4. ಬಾಳಣ್ಣ 5. ವಿರೂಪಾಕ್ಷ–ಬಸವಂತ 6. ಪರಮ್ಮ.*

## *ನಾಟಕದಕಥಾವಸ್ತು :–*

ಸಂಗ್ಯಾ–ಬಾಳ್ಯಾ ಇಬ್ಬರೂಜೀವದ ಗೆಳೆಯರು.ಸಂಗ್ಯಾಊರಿನ ಶ್ರೀಮಂತ ಕುಟುಂಬಕ್ಕೆ ಸೇರಿದವನು. ಬಾಳ್ಯಾ ಬಡವಆದರೆ ಬಡತನಅವರ ಸ್ನೇಹಕ್ಕೆಯಾವಅಡ್ಡಿಯನ್ನುತಂದಿರುವುದಿಲ್ಲ. ನಾಟಕದ ಪ್ರಾರಂಭದ ಹೊತ್ತಿಗೆ ಬಡತನದ ಬೇಗೆಯಿಂದ ಬಾಳ್ಯಾ ಸಾಹುಕಾರನ ಮನೆಯಲ್ಲಿದುಡಿದು ಸಂಸಾರದ ಹೊಟ್ಟೆತುಂಬಿಸಲು ಒದ್ದಾಡುತ್ತಿದ್ದರಿಂದಎಂಟು ಹತ್ತು ದಿನಗಳಿಂದ ತನ್ನ ಸ್ನೇಹಿತನಾದಸಂಗ್ಯಾನನ್ನುಕಾಣದೆ ಪರಿತಪಿಸಿ ಅವನಿಗಾಗಿ ಹುಡುಕುತ್ತಾ ಬೀದಿಗೆ ಬರುತ್ತಾನೆ. ಸಂಗಣ್ಣನು ಅಷ್ಟೇ ಸ್ನೇಹಿತನನ್ನುಕಾಣದೆಅನ್ನ–ನೀರು ಸೇವಿಸಲು ಕೂಡ ಮನಸ್ಸಾಗದೆಅವನನ್ನೇ ಹುಡುಕುತ್ತಾ ಬೀದಿಯಲ್ಲಿಅಲೆಯುತ್ತಿರುತ್ತಾನೆ. ಈ ಸಂದರ್ಭದಲ್ಲಿಅವರಿಬ್ಬರ ಭೇಟಿಯಾಗುತ್ತದೆ. ಬಾಳ್ಯಾನ ಸ್ಥಿತಿ ಅರಿತ ಸಂಗ್ಯಾಅವನನ್ನು ಮಾರ್ವಾಡಿಅಂಗಡಿಗೆಕರೆದೊಯ್ದು ಒಳ್ಳೆಯ ಬಟ್ಟೆ–ಬರೆಗಳನ್ನು ಕೊಡಿಸುತ್ತಾನೆ. ಮಾರ್ವಾಡಿಉದ್ರಿಕೊಡದಿದ್ದರಿಂದಬಟ್ಟೆಯದುಡ್ಡುತರಲು ಮನೆಗೆ ಹೋದಾಗ ಬಾಳ್ಯಾ ಅರಿವೆಯಗಂಟಿನೊಂದಿಗೆಅಂಗಡಿಯಿಂದಓಡಿಹೋಗಲು ಪ್ರಯತ್ನಿಸಿ ಸಿಕ್ಕಿ ಬೀಳುತ್ತಾನೆ.ಸಂಗ್ಯಾ ಬಂದುಅವನನ್ನು ಬಿಡಿಸಿಕೊಂಡು ಕರೆದೊಯ್ಯುತ್ತಾನೆ. ಇಬ್ಬರೂ ಪಗಡೆಆಡಿ ಆನಂದಿಸುತ್ತಾರೆ.ಊರಲ್ಲಿತಮ್ಮಿಬ್ಬರನ್ನೂ ಸಂಗ್ಯಾ–ಬಾಳ್ಯಾ ಎಂದುಜೋಡಿಯಲ್ಲಿಕರೆಯುವಂತಾಗಬೇಕೆಂಬುದು ಸಂಗಣ್ಣನಆಶಯ.

ಈರಣ್ಣ ಈ ಊರಿನ ಮತ್ತೊಬ್ಬ ಶ್ರೀಮಂತ ಮುತ್ತಿನ ವ್ಯಾಪಾರಕ್ಕೆ ಆಗಾಗ ಬಳ್ಳಾರಿಯ ಕಡೆಗೆ ಹೋಗುತ್ತಿರುತ್ತಾನೆ. ಅವನ ಹೆಂಡತಿ ಗಂಗಿ ತುಂಬಾ ಚೆಲುವೆಯಾದವಳು. ಬಳ್ಳಾರಿಯ ಸಾಹುಕಾರ ವ್ಯಾಪಾರಕ್ಕೆಂದು ಹೇಳಿ ಕಳುಹಿಸುತ್ತಾನೆ. ಅವನಿಗೆ ಚೆಲುವೆ ಹೆಂಡತಿಯೊಬ್ಬಳನ್ನೇ ಮನೆಯಲ್ಲಿ ಬಿಟ್ಟು ಹೇಗೆ ಹೋಗುವುದು ಎಂಬ ಚಿಂತೆ ಕುಸ್ತಿಪಟುಗಳನ್ನಾಗಿ ಬೆಳೆಸಿದ ತನ್ನತಮ್ಮಂದಿರನ್ನುಕರೆದುತಾನು ವ್ಯಾಪಾರಕ್ಕೆ ಹೋಗುತ್ತಿರುವುದರಿಂದಮನೆಯಕಡೆಚೆನ್ನಾಗಿ ನೋಡಿಕೊಳ್ಳಬೇಕೆಂದು ಹೇಳಿ ಮನೆಯಲ್ಲಿ ಹೆಂಡತಿಯಜೊತೆಇರಲು ಹೇಳಿ ಮೇಲು ಮನೆಯ ಪರಮ್ಮನನ್ನು ಕರೆಸಿಕೊಳ್ಳಲು ತಿಳಿಸಿ ಹೋಗುತ್ತಾ ಗಂಗಿ ಪರಮ್ಮನಿಗೆ ಕರೆಕಳಿಸುತ್ತಾಳೆ. ಅವಳೂ ಸಂತೋಷದಿಂದಲೇ ಬರುತ್ತಾಳೆ ಇಬ್ಬರೂ ಸೇರಿ ಮರಡಿ ಬಸವಣ್ಣದೇವರಿಗೆ ಪೂಜೆಗಾಗಿ ನೈವೇದ್ಯತಯಾರು ಮಾಡುತ್ತಾರೆ. ನಂತರ ಗಂಗಿ ಮತ್ತು ಪರಮ್ಮ ಮರಡಿ ಬಸವಣ್ಣನಜಾತ್ರೆಗೆ ಹೋಗುತ್ತಾರೆ.ಗುಡಿಯ ಪೂಜಾರಿ ಅವಳ ಮೇಲೆ ಕಣ್ಣಿಟ್ಟಾಗ ಪರಮ್ಮಗಂಗಿಯಗಂಡ ಮತ್ತು ಭಾವಮೈದುನರಹೆಸರನ್ನು ಹೇಳಿ ಪೂಜಾರಿಯನ್ನು ಹೆದರಿಸಿ ಆಕೆಯತಂಟೆಗೆ ಬಾರದಂತೆ ನೋಡಿಕೊಳ್ಳುತ್ತಾಳೆ.ಸಂಗ್ಯಾ–ಬಾಳ್ಯಾ ಇಬ್ಬರೂಕೂಡಜಾತ್ರೆಗೆಂದು ಬಂದವರುಗುಡಿಯಕಡೆ

ಬರುತ್ತಾರೆ.ಸಂಗ್ಯಾಗಂಗಿಯನ್ನು ನೋಡುತ್ತಲೇ ನೆಟ್ಟಕಣ್ಣು ಕೀಳದವನಾಗುತ್ತಾನೆ. ಕುತ್ತಿಗೆಯಿಂದ ಹೇಗೋ ಜಾರಿದಗಂಗಿಯ ಬಂಗಾರದ ಸರಿಗೆ ಸಂಗ್ಯಾನಿಗೆದೊರೆಯುತ್ತದೆ.ದಾರಿಯಲ್ಲಿ ಅವನು ಅವಳನ್ನು ಅಡ್ಡಗಟ್ಟಿ ಮಾತನಾಡಿಸಲು ಪ್ರಯತ್ನಿಸುತ್ತಾನೆ. ಆದರೆ ಗಂಗಿ ಅವನ ಮಾತುಗಳಿಗೆ ಸೊಪ್ಪು ಹಾಕುವುದಿಲ್ಲ. ಬದಲಾಗಿ ಬೈದು ಕಳಿಸುತ್ತಾಳೆ. ಮನೆಗೆ ಬಂದ ಮೇಲೂ ಸಂಗ್ಯಾನಿಗೆಗಂಗಿಯದೇಚಿಂತೆ. ಹೇಗಾದರೂ ಮಾಡಿ ಅವಳನ್ನು ಪಡೆಯಬೇಕೆಂದುತನ್ನ ಗೆಳೆಯನ ಮೊರೆ ಹೋಗುತ್ತಾನೆ. ಆಗ ಪರಸ್ತ್ರೀ ಬಯಸುವುದುತಪ್ಪೆಂದು ಬಾಳ್ಯಾ ಬುದ್ಧಿವಾದ ಹೇಳಿದರೂ ಸಂಗಣ್ಣ ಕೇಳುವ ಸ್ಥಿತಿಯಲ್ಲಿ ಇರುವುದಿಲ್ಲ. ಕೊನೆಗೆ ಸ್ನೇಹಿತನಋಣಕ್ಕೆಕಟುಬಿದ್ದಬಾಳ್ಯಾ ಅವಳ ಮನೆಗೆ ಸೆರಗಿಯ ನೆವ ಮಾಡಿಕೊಂಡುಹೋಗುತ್ತಾನೆ. ಗಂಗಿ ಆದರದಿಂದ ಸತ್ಕರಿಸಿ ಯಾರೂಇಲ್ಲದ ಸಂದರ್ಭ ನೋಡಿಕೊಂಡು ಸಂಗ್ಯಾನ ವಿಷಯ ಪ್ರಸ್ತಾಪಿಸುತ್ತಾನೆ. ಆಗ ಬೈದು ಬುದ್ಧಿ ಹೇಳಿ ಬಾಳ್ಯಾನ ಕಳಿಸುತ್ತಾಳೆ.ಈ ವಿಷಯ ತಿಳಿದ ಸಂಗ್ಯಾ ಬೇಸರಪಟ್ಟುಕೊಳ್ಳುತ್ತಾನೆ. ಕೊನೆಗೆ ತಾನೇ ನೇರವಾಗಿಗಂಗಿಯನ್ನು ಮಾತನಾಡಿಸಬೇಕೆಂದು ಹಾತೊರೆಯುತ್ತಾನೆ. ಆಗ ಅಂತಹಒಂದು ಸಂದರ್ಭದೊರೆಯುತ್ತಲೇ ಗಂಗಿಗೆ ತನ್ನ ಪ್ರೀತಿಯ ವಿಷಯ ಹೇಳುತ್ತಾನೆ. ಹೀಗೆ ಮಾಡಿದರೆ ನನ್ನಗಂಡ ಮತ್ತು ಮೈದುನರು ಅವನಿಗೆ ತಕ್ಕ ಶಿಕ್ಷೆ ನೀಡುತ್ತಾರೆಂದು ಹೇಳುತ್ತಾಳೆ.ಆದರೂ ಸಂಗ್ಯಾ ಅವಳನ್ನು ಬಿಡಲುತಯಾರಿಲ್ಲ.'ಅತ್ತಿ ಮನೆ ಸೊಸಿ ತಾನು ,ತನ್ನಒಗೆತನ ಹರಿಸಬೇಡ'. ಎಂದು ಗಂಗಿ ಅವನನ್ನು ಬೇಡಿಕೊಳ್ಳುತ್ತಾಳಲ್ಲದೆ ನಾನಾ ರೀತಿಯ ಬುದ್ಧಿವಾದ ಹೇಳಿ ವಿನಾಕಾರಣ ನಿನ್ನಜೀವನ ಹಾಳು ಮಾಡಿಕೊಳ್ಳಬೇಡ ಎಂದುಉಪದೇಶ ನೀಡಿ ಕಳಿಸುತ್ತಾಳೆ.ಮುಂದೇನು ಮಾಡಬೇಕೆಂದುಯೋಚನೆಯಲ್ಲಿರುವಾಗಲೇ ಕೊರವಿಯೊಬ್ಬಳು ಭೇಟಿಯಾಗಿ ಮೇಲುಮನೆ ಪರಮ್ಮನನ್ನು ಬಳಸಿಕೊಂಡರೆ ಅವನಿಗೆ ಬಯಸಿದ ಹೆಣ್ಣು ದೊರೆಯುತ್ತಾಳೆ ಎಂದು ಸಲಹೆ ಕೊಡುತ್ತಾಳೆ.ಆ ಪ್ರಕಾರ ಸಂಗ್ಯಾ–ಬಾಳ್ಯಾ ಭೇಟಿಯಾಗಿ ಹಣ–ಬಂಗಾರದ ಆಸೆ ತೋರಿಸಿ ಗಂಗಿಒಪ್ಪಿಸಲುಕೇಳಿಕೊಳ್ಳುತ್ತಾರೆ.ಪರಮ್ಮ ಆಮಿಷಕ್ಕೆ ಒಳಗಾಗಿ ಗಂಗಿ ಸಂಗ್ಯಾನ ಮೇಲೆ ಮನಸ್ಸಾಗಿದೆ ಎಂಬ ವಿಷಯವನ್ನು ಅವಳ ಮೈದುನರಿಗೆ ತಿಳಿಸುವುದಾಗಿ ಬೆದರಿಕೆಯೊಡ್ಡಿ ಗಂಗಿ ಸಂಗಣ್ಣನನ್ನುಕೂಡುವುದಕ್ಕೆಒಪ್ಪುವಂತೆ ಮಾಡುತ್ತಾಳೆ.ಸಂಗ್ಯಾನನ್ನುಕರೆತರಲುಒಪ್ಪಿಗೆಕೊಟ್ಟ ಮೇಲೆ ಗಂಗಿ ಸಂಗ್ಯಾನಿಗೆ ನಿಷ್ಠಳಾಗಿತನ್ನ ಪ್ರೀತಿಯನ್ನು ಅವನಿಗೆ ಧಾರೆ ಎರೆಯುತ್ತಾಳೆ.

ಈ ವಿಷಯಊರಲ್ಲಿ ಗುಸು ಗುಸು ಸುದ್ಧಿ ಹರಡುತ್ತಲೇಈರಣ್ಣನಿಗೆಕೆಟ್ಟ ಕನಸು ಬಿದ್ದುಊರಿಗೆ ಬರುತ್ತಾನೆ.ಊರಿಗೆ ಬರುತ್ತಲೇಗಂಗಿ ಸಂಗ್ಯಾರ ವಿಷಯ ತಿಳಿಯುತ್ತದೆ.ಸಂಗ್ಯಾನನ್ನು ಹಿಡಿಯಬೇಕೆಂದು ಮನೆಗೆ ಧಾವಿಸುತ್ತಾನೆ. ಮುಂಬಾಗಿಲು ಅಗುಳಿ ಹಾಕಿರುತ್ತದೆ.ಕೋಪದಿಂದಕೂಗಾಡುತ್ತಾನೆ. ಒಳಗಿದ್ದ ಪ್ರಣಯಿಗಳಿಗೆ ಏನು ಮಾಡಬೇಕೆಂದು ತಿಳಿಯುವುದಿಲ್ಲ. ಕೊನೆಗೆ ಮನೆಯೊಳಗೆ ಕತ್ತಲು ಮಾಡಿ ಬಾಗಿಲು ತೆರೆಯುತ್ತಾಳೆ.ಸಂಗ್ಯಾ ಬಾಗಿಲು ಮರೆಯಿಂದ ತಪ್ಪಿಸಿಕೊಂಡು ಓಡಿ ಹೋಗುತ್ತಾನೆ. ಆ ಸಂದರ್ಭದಲ್ಲಿ ಅವನ ರುಮಾಲು ಕೆಳಗೆ ಬೀಳುತ್ತದೆ.ಸಂಗ್ಯಾನಗುರುತು ಸಿಗುತ್ತದೆ.ಈರಣ್ಣಕೋಪದಲ್ಲಿತಮ್ಮಂದಿರಿಗೆ ಹೆಂಡತಿಯ ಬೆಲೆ ಬಾಳುವ ವಸ್ತ್ರ , ತೊಡಿಗೆಗಳನ್ನು ಕಸಿದುಕೊಂಡು ತವರು ಮನೆಗೆ ಅಟ್ಟಲು ಹೇಳುತ್ತಾನೆ. ಗಂಗಿ ತನ್ನನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿ ಸೋಲುತ್ತಾಳೆ.

ಸಂಗ್ಯಾನ ಮೇಲಿನ ಸೇಡು ತೀರಿಸಿಕೊಳ್ಳುವುದಕ್ಕಾಗಿ ಅವನನ್ನು ಹಿಡಿದುಕೊಲ್ಲುವುದೊಂದೇದಾರಿಎಂದುಈರಣ್ಣ ಭಾವಿಸುತ್ತಾನೆ. ಅದಕ್ಕಾಗಿ ಅವನ ಜೀವದ ಗೆಳೆಯ ಬಾಳ್ಯಾನನ್ನು ಬಳಸಿಕೊಳ್ಳಲು ಯೋಚಿಸುತ್ತಾನೆ. ಸ್ನೇಹಿತನಿಗೆದ್ರೋಹ ಬಗೆಯಲು ಬಾಳ್ಯಾ ಒಪ್ಪುವುದಿಲ್ಲ. ಕೊನೆಗೆ ಜೀವ ಬೆದರಿಕೆ ಹಾಕಿ ಬಾಳ್ಯಾನಿಗೆ ಹೊಲ , ಮನೆ , ಎತ್ತುಗಳ ಆಮಿಷ ತೋರಿಸುತ್ತಾನೆ.

ಗಂಗಿಯ ವಿಷಯ ತಿಳಿದು ಸಂಗಣ್ಣನನ್ನು ಉಳಿಸುವ ಸಲುವಾಗಿ ಬೈಲುವಾಡಕ್ಕೆ ಬರದೇಇರಲು ಪತ್ರ ಬರೆಯುತ್ತಾಳೆ.ಆದರೆ ಆ ಪತ್ರ ಬಾಳ್ಯಾನ ಕೈಗೆ ದೊರೆಯುತ್ತದೆ.ಅದನ್ನು ಅವನು ಸಂಗಣ್ಣನಿಗೆತೋರಿಸದೆ'ಪಂಚಮಿ ಹಬ್ಬಕ್ಕೆ ಬಾಳ್ಯಾನೊಡಗೂಡಿ ಬಾ'ಎಂದು ಬೇರೊಂದು ಪತ್ರಗಂಗಿಯ ಹೆಸರಲ್ಲಿ ಬರೆದು ಸಂಗಣ್ಣನಿಗೆಕೊಡುತ್ತಾನೆ.

ಗಂಗಿಯನ್ನು ನೋಡಬೇಕೆಂಬ ಉತ್ಕಟಅಪೇಕ್ಷೆವಿದ್ದರೂ ಹೊರಡುವಾಗ ಅಪಶಕುನಗಳಾಗಿದ್ದರಿಂದ ಸಂಗ್ಯಾ ಬೈಲುವಾಡಕ್ಕೆ ಬರಲುಒಲ್ಲೆನೆನ್ನುತ್ತಾನೆ.ಗಂಗಿಯಒತ್ತಾಯವನ್ನು ಮುಂದೆ ಮಾಡಿ ಹೋಗಿಯೇ ಬರೋಣವೆಂದು ಸಂಗ್ಯಾನನ್ನುಒಪ್ಪಿಸುತ್ತಾನೆ. ಬೈಲುವಾಡದಕೆರೆಯಏರಿಯ ಮೇಲೆ ಗಂಗಿಯ ಭೇಟಿಯಾಗುತ್ತದೆ.ಬರಬೇಡವೆಂದು ಪತ್ರ ಬರೆದು ತಿಳಿಸಿದರೂ ಬಂದ ಸಂಗ್ಯಾನನ್ನು ನೋಡಿ ಗಂಗಿಗೆ ಸಂಕಟವಾಗುತ್ತದೆ.

ಈರಣ್ಣನಜನಅವನನ್ನುಕೊಲ್ಲದೇ ಬಿಡುವುದಿಲ್ಲ ಎಂಬುದುಗೊತ್ತು.ದುಃಖ ಒತ್ತರಿಸಿ ಬರುತ್ತಿದ್ದರೂಅವನನ್ನುಕರೆತಂದ ಬಾಳ್ಯಾನ ಮೇಲೆ ಸಿಟ್ಟು ವ್ಯಕ್ತಪಡಿಸುತ್ತಾಳೆ. ಅವನ ವಂಶಕ್ಕೆ ಶಾಪ ಹಾಕುತ್ತಾಳೆ.ಸಂಗ್ಯಾನದುರವಸ್ಥೆಗಾಗಿ ಮರುಗುತ್ತಾಳೆ. ಸಂಗ್ಯಾತನಗೆ ಏನೂ ಆಗುವುದಿಲ್ಲವೆಂದು ಗಂಗಿಗೆ ಸಮಾಧಾನಪಡಿಸಲು ಪ್ರಯತ್ನಿಸುತ್ತಾನೆ. ಹಾಗೂ ಆದಷ್ಟು ಬೇಗ ಊರು ಸೇರಿಕೊಳ್ಳಲು ತವಕಿಸುತ್ತಾನೆ. ಸಂಗ್ಯಾ–ಬಾಳ್ಯಾ ಊರಿಗೆ ಮರಳುವಾಗ ದಾರಿಯಲ್ಲಿ ಬಾಳ್ಯಾ ಅವನನ್ನುಅಡ್ಡದಾರಿಯಲ್ಲಿಕರೆದೊಯ್ದು ಬಿದಿರು ಮೇಳೆಯ ಬಳಿ ಕೊಳ್ಳಿ ದೀಪ ಕಾಣುತ್ತಲೇ ಮಾಯವಾಗುತ್ತಾನೆ. ಈರಣ್ಣ ಹಾಗೂ ಅವನ ತಮ್ಮಂದಿರುಆರ್ಭಟಿಸುತ್ತಾ ಸಂಗಣ್ಣನಎದುರು ನಿಲ್ಲುತ್ತಾರೆ. ಸಂಗ್ಯಾತನ್ನನ್ನುಕೊಲ್ಲಬೇಡಿರೆಂದುದೈನ್ಯದಿಂದ ಕೇಳಿಕೊಂಡರೂ ಕೇಳದೆ ಅಮಾನುಷವಾದರೀತಿಯಲ್ಲಿ ಅವನ ರುಂಡ ಕತ್ತರಿಸಿ ಚೆಲ್ಲುತ್ತಾರೆ.ಕೊನೆಗೆ ಈರಣ್ಣನಿಗೆಪ್ರಜ್ಞೆ ಬರುತ್ತದೆ.ಮುಂದೆ ತಳವಾರನೊಬ್ಬನಿಂದ ಸಂಗ್ಯಾನಕೊಲೆಯಾದ ವಿಷಯಸರ್ಕಾರಕ್ಕೆ ತಿಳಿಯುತ್ತದೆ.ಈರಣ್ಣ ಪೋಲೀಸ್‌ಠಾಣೆಗೆ ಹೋಗಿ ಸಂಗಣ್ಣನನ್ನು ಕೊಲೆ ಮಾಡಿರುವುದಾಗಿ ಒಪ್ಪಿಕೊಳ್ಳುತ್ತಾನೆ. ಮುಂದೆಕೊಲೆಗಾರರಿಗೆಗಲ್ಲು ಶಿಕ್ಷೆಯಾಗುವ ಸಂಭಾವ್ಯದೊಂದಿಗೆ ನಾಟಕ ಮುಗಿಯುತ್ತದೆ.

## *ಸಮಾರೋಪ :–*

ಸಂಗ್ಯಾ–ಬಾಳ್ಯಾ ನಾಟಕದ ಶಿಖರಪ್ರಾಯವಾದ ಘಟನೆಗಳು ಎರಡನೇ ಭಾಗದಲ್ಲಿವೆ. ಸಂಗ್ಯಾ–ಗಂಗಿಯರ ಪ್ರಣಯದ ವಿಷಯಊರೆಲ್ಲಾಗುಲ್ಲಾಗುವುದರಜೊತೆಗೆಈರ್ಯಾನ ಕಿವಿಗೂ ತಲುಪುತ್ತದೆ.ಈರಣ್ಣ ಕೋಪಗೊಳ್ಳುವುದು ,ಗಂಗಿಯನ್ನು ಮನೆಯಿಂದ ಹೊರಗಟ್ಟುವುದು , ಬಾಳ್ಯಾನ ಸಹಾಯದಿಂದ ಸಂಗ್ಯಾನನ್ನುಕೊಲ್ಲಲುಯೋಜನೆರೂಪಿಸುವುದು , ಕೊನೆಯಲ್ಲಿ ಬೈಲುವಾಡದ ಹಾದಿಯಲ್ಲಿ ಸಂಗ್ಯಾ ಕೊಲೆಗೊಳ್ಳುವುದು ಮುಂತಾದ ಮಹತ್ವದ ಘಟನೆಗಳು ಇಲ್ಲಿಜರುಗುತ್ತವೆ. ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸಬಹುದಾದ ಸಂಭಾವ್ಯದೊಂದಿಗೆ ನಾಟಕ ಮುಗಿಯುತ್ತದೆ.

'ಸಂಗ್ಯಾ–ಬಾಳ್ಯಾ'ಜನಪದರಂಗಭೂಮಿಯಒಂದು ಮಹತ್ವದಕೃತಿಯಾಗಿದ್ದುಸಂಗ್ಯಾ–ಬಾಳ್ಯಾ ವಸ್ತು ಸಾಮಾಜಿಕವಾದುದು.ಕವಿ ತನ್ನ ಪರಿಸರದಲ್ಲಿಯೇ ನಡೆದಿರಬಹುದಾದನೈಜಘಟನೆಯೊಂದನ್ನು ವಸ್ತುವಾಗಿಟ್ಟುಕೊಂಡುಕಲಾತ್ಮಕವಾಗಿಕಾವ್ಯವನ್ನುಕಟ್ಟಿದ್ದಾನೆಂದುಅನೇಕರು ಭಾವಿಸಿದ್ದಾರೆ.ಪರಸ್ತ್ರೀಯೊಂದಿಗಿನ ಅನೈತಿಕ ಪ್ರಣಯದದುರಂತಕಥೆಇದರಕಥಾವಸ್ತು.

## *ಗ್ರಂಥಋಣ :–*


1. ಕಂಬಾರಚಂದ್ರಶೇಖರ ಮತ್ತುಕುರ್ತಕೋಟಿಕೆ.ಡಿ. – ಸಂಗ್ಯಾ–ಬಾಳ್ಯಾ(ಸಂ) ಮನೋಹರಗ್ರಂಥಮಾಲೆ–ಧಾರವಾಡ– 1980.
2. ಮಲಶೆಟ್ಟಿ ಬಸವರಾಜ–ಉತ್ತರಕರ್ನಾಟಕದ ಬಯಲಾಟಗಳು, ಕ.ವಿ.ವಿ.ಧಾರವಾಡ– 1983.
3. ಕನ್ನಡ ಎಂ.ಎ ಪ್ರಥಮ ವರ್ಷ ಪಠ್ಯಕ್ರಮ ಸಂಚಿಕೆ–5 ,ಕರ್ನಾಟಕರಾಜ್ಯ ಮುಕ್ತ ವಿ.ವಿ. ಮೈಸೂರು. – 2008.
4. ಕನ್ನಡ ಸಾಹಿತ್ಯ ಕೋಶ –ರಾಜಪ್ಪ ದಳವಾಯಿ.